ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು.

ಸಂಖ್ಯೆ: ಸಿಎಸಿ–05/ಪ.ಪ್ರಾ.ಶಾ.ಶಿ.ನೇ/01/2019–20 ದಿನಾಂಕ: 19–12–2019

## ಪ್ರಕಟಣೆ

ಪದವೀಧರ ಪ್ರಾಥಮಿಕ ಶಾಲೆಗಳ ಶಿಕ್ಷಕರ (6 ರಿಂದ 8ನೇ ತರಗತಿ ವೃಂದ) ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ 1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ದಿನಾಂಕ: 08–11–2019ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಪ್ರಸ್ತುತ 1:1 ತಾತ್ಕಾಲಿಕ ಆಯ್ಕೆಪಟ್ಟಿಯ ಬಿಡುಗಡೆಗೆ ಸಂಬಂಧಿಸಿದಂತೆ ಕೆಳಕಂಡ ವಿವರಗಳನ್ನು ಪರಿಗಣಿಸಿದೆ.

- 1:2 ತಾತ್ಕಾಲಿಕ ಪರಿಶೀಲನಾ ಪಟ್ಟಿಗೆ ಪರಿಗಣಿಸಿದ ಅಭ್ಯರ್ಥಿಗಳಲ್ಲಿ **127** (ಪರೀಕ್ಷೆ–1= 37, ಪರೀಕ್ಷೆ–2=90) ಅಭ್ಯರ್ಥಿಗಳು ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ಇವರ ಹಂತದಲ್ಲಿ ನಡೆಸಲಾದ ಮೂಲ ದಾಖಲೆಗಳ ಪರಿಶೀಲನೆಗೆ ಗೈರುಹಾಜರಾದ ಕಾರಣ ಇವರನ್ನು 1:1 ತಾತ್ಕಾಲಿಕ ಆಯ್ಕೆಪಟ್ಟಿಗೆ ಕೈಬಿಡಲಾಗಿದೆ, ಪಟ್ಟಿಯನ್ನು **ಅನುಬಂಧ–1**ರಲ್ಲಿ ಪ್ರಕಟಿಸಿದೆ.
- 1:2 ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ **207** ಅಭ್ಯರ್ಥಿಗಳು ಎರಡು ಜಿಲ್ಲೆಗಳಲ್ಲಿ ಆಯ್ಕೆಯಾಗಿದ್ದು, ಪ್ರಸ್ತುತ ಅಂತಹ ಅಭ್ಯರ್ಥಿಗಳ ಸಂಬಂಧಪಟ್ಟ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ಇವರಿಗೆ ಮೂಲದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ನೀಡಿದ **ಮುಚ್ಚಳಿಕೆಯಲ್ಲಿ** ದಾಖಲಿಸಿರುವಂತೆ ಅವರು ಅಪೇಕ್ಷಿಸಿರುವ ಜಿಲ್ಲೆಯಲ್ಲಿ ಆಯ್ಕೆಗೆ ಪರಿಗಣಿಸಲಾಗಿದೆ.
- **22** ಅಭ್ಯರ್ಥಿಗಳು ಒಂದೇ ಜಿಲ್ಲೆಯಲ್ಲಿ ಎರಡು ಹುದ್ದೆಗಳಿಗೆ 1:2 ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾಗಿದ್ದು, ಪ್ರಸ್ತುತ ಅಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ಇವರಿಗೆ ಮೂಲದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ನೀಡಿದ **ಮುಚ್ಚಳಿಕೆಯಲ್ಲಿ** ದಾಖಲಿಸಿರುವಂತೆ ಅವರು ಅಪೇಕ್ಷಿಸಿರುವ ಹುದ್ದೆಯನ್ನು ಆಯ್ಕೆಗೆ ಪರಿಗಣಿಸಲಾಗಿದೆ.
- 1:2 ತಾತ್ಕಾಲಿಕ ಪರಿಶೀಲನಾಪಟ್ಟಿಗೆ ಅಭ್ಯರ್ಥಿಗಳಿಂದ ಸಲ್ಲಿಸಲಾದ ಆಕ್ಷೇಪಣೆಗಳಲ್ಲಿ ಸೂಕ್ತವಾದ ವಿವರಗಳನ್ನು ಪರಿಗಣಿಸಿ ದತ್ತಾಂಶದಲ್ಲಿ ಅಳವಡಿಸಿದೆ.
- ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ನೇಮಕಾತಿ ಅಧಿಸೂಚನೆಯಂತೆ ನಿಯಮಾನುಸಾರ ಅರ್ಹತೆ ಗಳಿಸದ ಅಂದರೆ,
    1. **ವಿದ್ಯಾರ್ಹತೆ:** ಹುದ್ದೆಗೆ ಅನುಗುಣವಾಗಿ ಪದವಿಯಲ್ಲಿ ಅಗತ್ಯ ಐಚ್ಛಿಕ ವಿಷಯ ಹಾಗೂ ಡಿ.ಇಡಿ/ ಬಿ.ಇಡಿ ಯಲ್ಲಿ ಅಗತ್ಯ ಬೋಧನಾ ವಿಷಯಗಳನ್ನು ಅಧ್ಯಯನ ಮಾಡದಿರುವ **29** ಅಭ್ಯರ್ಥಿಗಳನ್ನು 1:1 ತಾತ್ಕಾಲಿಕ ಆಯ್ಕೆ ಪಟ್ಟಿಗೆ ಕೈಬಿಡಲಾಗಿದೆ, ಪಟ್ಟಿಯನ್ನು **ಅನುಬಂಧ–2**ರಲ್ಲಿ ಪ್ರಕಟಿಸಿದೆ.
    2. **ಅರ್ಹತಾ ಅಂಕಗಳು:** ಪದವಿಯ ಐಚ್ಛಿಕ ವಿಷಯಗಳಲ್ಲಿ ಅಗತ್ಯ ಅರ್ಹತೆ (ಶೇ. 45/50 ಅಂಕಗಳು) ಗಳಿಸದೇ ಇರುವ **04** ಅಭ್ಯರ್ಥಿಗಳನ್ನು 1:1 ತಾತ್ಕಾಲಿಕ ಆಯ್ಕೆ ಪಟ್ಟಿಗೆ ಕೈಬಿಡಲಾಗಿದೆ, ಪಟ್ಟಿಯನ್ನು **ಅನುಬಂಧ–3**ರಲ್ಲಿ ಪ್ರಕಟಿಸಿದೆ.

3. **ಟಿ.ಸಿ.ಹೆಚ್:** ಟಿ.ಸಿ.ಹೆಚ್ ವಿದ್ಯಾರ್ಹತೆಯು ಕೇವಲ ಸರ್ಟಿಫಿಕೇಟ್ ಕೋರ್ಸ್ ಆಗಿದ್ದು, ಡಿಪ್ಲೊಮೊ ಅಥವಾ ಪದವಿ ವಿದ್ಯಾರ್ಹತೆಗೆ ತತ್ಸಮಾನವಾಗಿರುವುದಿಲ್ಲ. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಡಿ.ಇಡಿ ಎಂದು ನಮೂದಿಸಿ ಅರ್ಜಿ ಸಲ್ಲಿಸಿರುತ್ತಾರೆ. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6–8) ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಉಲ್ಲೇಖಿಸಿದಂತೆ, ಶಿಕ್ಷಕರ ಶಿಕ್ಷಣದ ಡಿಪ್ಲೋಮೊ ಅಥವಾ ಪದವಿ ಕೋರ್ಸಿನಲ್ಲಿ ಅರ್ಜಿ ಸಲ್ಲಿಸಿದ ಹುದ್ದೆಗೆ ಸಂಬಂಧಿಸಿದ ಬೋಧನಾ ವಿಷಯ/ ವಿಧಾನವನ್ನು ಅಧ್ಯಯನ ಮಾಡದಿರುವ **08** ಅಭ್ಯರ್ಥಿಗಳನ್ನು 1:1 ತಾತ್ಕಾಲಿಕ ಆಯ್ಕೆ ಪಟ್ಟಿಗೆ ಕೈಬಿಡಲಾಗಿದೆ, ಪಟ್ಟಿಯನ್ನು **ಅನುಬಂಧ–4**ರಲ್ಲಿ ಪ್ರಕಟಿಸಿದೆ.
4. **ಮೀಸಲಾತಿ:** ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿದ ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲನಾ ಸಮಯದಲ್ಲಿ ಒದಗಿಸದ ಹಿನ್ನೆಲೆಯಲ್ಲಿ ಹಾಗೂ ನಿಗದಿಪಡಿಸಿದ ಅಗತ್ಯ ಶೇಕಡಾವಾರು ಅರ್ಹತಾ ಅಂಕಗಳು ಗಳಿಸದೇ ಇರುವ **04** ಅಭ್ಯರ್ಥಿಗಳನ್ನು 1:1 ತಾತ್ಕಾಲಿಕ ಆಯ್ಕೆ ಪಟ್ಟಿಗೆ ಕೈಬಿಡಲಾಗಿದೆ, ಪಟ್ಟಿಯನ್ನು **ಅನುಬಂಧ–5**ರಲ್ಲಿ ಪ್ರಕಟಿಸಿದೆ.

ಮೇಲ್ಕಂಡ ಕಾರಣಗಳಿಂದ **172** ಅಭ್ಯರ್ಥಿಗಳನ್ನು ಆಯ್ಕೆ ಪಟ್ಟಿಗೆ ಕೈಬಿಡಲಾಗಿರುತ್ತದೆ.

ಸದರಿ ಕಾರಣಗಳಿಂದ 1:2 ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಸೇರ್ಪಡೆಯಾಗದ **15** ಹೊಸ ಅಭ್ಯರ್ಥಿಗಳು 1:1 ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸೇರ್ಪಡೆಯಾಗಿದ್ದು, ಸದರಿಯವರ ಮೂಲ ದಾಖಲೆಗಳ ಪರಿಶೀಲನೆಯನ್ನು ದಿನಾಂಕ: 20–12–2019 ಹಾಗೂ 21–12–2019 (ಎರಡು ದಿನಗಳೊಳಗಾಗಿ) ಸಂಬಂಧಪಟ್ಟ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ಇವರಿಗೆ ನಿರ್ವಹಿಸಲು ಸೂಚಿಸಲಾಗುವುದು. ಸದರಿ ಅಭ್ಯರ್ಥಿಗಳು ತಪ್ಪದೇ ಮೂಲದಾಖಲೆಗಳೊಂದಿಗೆ ಪರಿಶೀಲನೆಗೆ ಹಾಜರಾಗಲು ಸೂಚಿಸಿದೆ. ಹೊಸದಾಗಿ ಸೇರ್ಪಡೆಯಾದ ಅಭ್ಯರ್ಥಿಗಳ ವಿವರವನ್ನು ಅನಬಂಧ–6ರಲ್ಲಿ ಪ್ರಕಟಿಸಿದೆ.

ಮೇಲ್ಕಂಡ ವಿವರಗಳನ್ನು ಒಳಗೊಂಡಂತೆ 1:1 ಅನುಪಾತದ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಹಾಗೂ ವಿವಿಧ ಕಾರಣಗಳಿಂದ 1:1 ತಾತ್ಕಾಲಿಕ ಆಯ್ಕೆಪಟ್ಟಿಗೆ ಕೈಬಿಡಲಾದ ಅನುಬಂಧ–1 ರಿಂದ ಅನುಬಂಧ–6 ರವರೆಗಿನ ಪಟ್ಟಿಗಳಲ್ಲಿನ ಅಭ್ಯರ್ಥಿಗಳ ಹೆಸರನ್ನು ದಿನಾಂಕ: 19–12–2019 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

19/12/2019.

**ವಿಶೇಷಾಧಿಕಾರಿ**